IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಜಯಂತ್ ಕಾಯ್ಕಿಣಿಯವರ ಕಥೆಗಳಲ್ಲಿ ಆಧುನಿಕತೆ ಮತ್ತು ಮನುಷ್ಯ ಸಂಬಂಧಗಳು

**ಶ್ರೀ. ಮಾರುತಿ [೧ & ೨]**
**೧. ಕನ್ನಡ ಸಹಾಯಕ ಪ್ರಾಧ್ಯಾಪಕರು**
**ಸ.ಪ್ರ.ದ ಕಾಲೇಜು ತೀರ್ಥಹಳ್ಳಿ**
**೨. ಸಂಶೋಧನಾ ವಿದ್ಯಾರ್ಥಿ**
**ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ**
**ಮಂಗಳೂರು ವಿ. ವಿ, ಮಂಗಳೂರು.**

ಮನುಷ್ಯನ ಜೀವನವೇ ಸಂಬಂಧಗಳ ಮೇಲೆ ನಿಂತಿದೆ. ಕುಟುಂಬ, ಸ್ನೇಹ, ದಾಂಪತ್ಯ, ಬಂಧುತ್ವ ಹಾಗೂ ಸಹೋದ್ಯೋಗಿಗಳ ಸಂಪರ್ಕ ಇವೆಲ್ಲವೂ ಮನುಷ್ಯನ ಅಸ್ತಿತ್ವಕ್ಕೆ ಆಧಾರವಾಗಿವೆ. ಆದರೆ ಆಧುನಿಕತೆಯ ಫಲವಾದ ಜಾಗತೀಕರಣ, ನಗರೀಕರಣ, ಕೈಗಾರಿಕೀಕರಣ, ಆಧುನಿಕ ಶಿಕ್ಷಣದ ವಿಸ್ತರಣೆ, ವೈಯಕ್ತಿಕ ಸ್ವಾತಂತ್ರ್ಯದ ಅರಿವು, ವಿಜ್ಞಾನ ಮತ್ತು ತಂತ್ರಜ್ಞಾನಗಳ ಪ್ರಗತಿ ಇವೆಲ್ಲವೂ ಮನುಷ್ಯನ ಜೀವನವನ್ನು ಮಾತ್ರವಲ್ಲದೆ ಅವನ ಸಂಬಂಧಗಳನ್ನೂ ಆಳವಾಗಿ ಪ್ರಭಾವಿಸಿ, ಮನುಷ್ಯ ಸಂಬಂಧಗಳ ಸ್ವರೂಪದಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿದೆ. ಆಧುನಿಕತೆಯ ಫಲವಾಗಿ ಮಾನವ ಸಂಬಂಧಗಳು ದುರ್ಬಲಗೊಂಡಿದೆ ಎನ್ನುವುದು ಈ ಕುರಿತ ಚರ್ಚೆಯ ಒಂದು ಮುಖವಾದರೆ ಅದು ಮನುಷ್ಯ ಸಂಬಂಧಗಳಲ್ಲಿ ತಂದಿರುವ ಸಕಾರಾತ್ಮಕ ಬದಲಾವಣೆಗಳ ಚರ್ಚೆಗಳೂ ಕೂಡ ಅಷ್ಟೇ ಮಹತ್ವದ್ದಾಗಿದೆ. ಆಧುನಿಕತೆಯು ಮನುಷ್ಯನನ್ನು ಹಳೆಯ ಸಂಪ್ರದಾಯಗಳ ಕಪಿಮುಷ್ಠಿಯಿಂದ ಬಿಡುಗಡೆಗೊಳಿಸಿ ಹೆಚ್ಚು ಮುಕ್ತವಾದ ಮತ್ತು ಸಮಾನತೆಯಾಧಾರಿತ ಮನುಷ್ಯ ಸಂಬಂಧಗಳನ್ನು ಸೃಷ್ಟಿಸಿದೆ. ಈ ಹಿನ್ನೆಲೆಯಲ್ಲಿ ಹೊಸ ತಲೆಮಾರಿನ ಕಥೆಗಾರರ ಸಾಲಿನಲ್ಲಿ ಕಾಣುವ ಕನ್ನಡದ ಸೂಕ್ಷ್ಮ ಸಂವೇದನೆಯ ಕಥೆಗಾರರಾದ ಜಯಂತ್ ಕಾಯ್ಕಿಣಿಯವರ ಕಥೆಗಳನ್ನು ಅನುಲಕ್ಷ್ಯಿಸಿ ಆಧುನಿಕತೆಯ ಪ್ರಭಾವದಿಂದ ಮನುಷ್ಯ ಸಂಬಂಧಗಳಲ್ಲಾದ ಸಕಾರಾತ್ಮಕ ಬೆಳವಣಿಗೆಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ಜಯಂತ್ ಕಾಯ್ಕಿಣಿಯವರ ಬಹುತೇಕ ಕಥೆಗಳು ಮಹಾನಗರಗಳ ಅನಾಮಧೇಯತೆಯ ನಡುವೆಯೂ ಮನುಷ್ಯನ ಪರಸ್ಪರ ಸ್ಪಂದನೀಯ ಗುಣ ಹಾಗೂ ಮಾನವೀಯತೆಯನ್ನು ಅನಾವರಣಗೊಳಿಸಿವೆ. ಇವರ ನಿಮಿತ್ತ,

ಕಣ್ಣಿಗೊಂದು ಕ್ಷಿತಿಜ, ಆರೋಹ (ದಗಡೂಪರುಬರ ಅಶ್ವಮೇಧ), ದಿಟ್ಟಿಬೊಟ್ಟು(ಬಣ್ಣದ ಕಾಲು), ನೀರು (ಚಾರ್ಮಿನಾರ್), ಬಾವಿಯಲ್ಲೊಂದು ಬಾಗಿಲು (ತೂಫಾನ್ ಮೇಲ್), ಬೆಳಕಿನ ಬಿಡಾರ, ಮೃಗನಯನ (ಅನಾರ್ಕಲಿಯ ಸೇಫ್ಟಿಪಿನ್) ಈ ಎಲ್ಲ ಕಥೆಗಳನ್ನು ಗಮನಿಸಿದಾಗ ಆಧುನಿಕತೆಯ ಅಬ್ಬರದಲ್ಲಿ ಮನುಷ್ಯ ಸಂಬಂಧಗಳು ಕಳೆದುಹೋಗದೆ ದೈನಂದಿನ ಸಣ್ಣ ಸಣ್ಣ ಸಂಗತಿಗಳಲ್ಲಿಯೂ ಈ ಸೂಕ್ಷ್ಮ ಸಂವೇದನೆಗಳು ಅಭಿವ್ಯಕ್ತಗೊಂಡು ಬದುಕಿನ ಬಗ್ಗೆ ಹೊಸ ಭರವಸೆಯ ಆಶಾಕಿರಣಗಳನ್ನು ಮೂಡಿಸುತ್ತವೆ.

ಜಯಂತ್ ಕಾಯ್ಕಿಣಿಯವರ 'ನಿಮಿತ್ತ' ಕಥೆಯ ಪ್ರಧಾನ ಪಾತ್ರವಾದ ದಿಗೂಮಾಮ ಮೂಲತಃ ಗೋಕರ್ಣದವನು. ಬ್ರಹ್ಮಚಾರಿಯಾಗಿಯೇ ಉಳಿದಿದ್ದ ಈತ ಮುಂಬೈನಲ್ಲಿ ಹಲವು ವರ್ಷ ಕಳೆಯುತ್ತಾನೆ. ತನ್ನ ಅರವತ್ತರ ಪ್ರಾಯದಲ್ಲಿ ಯಾವುದೋ ರೋಗಕ್ಕೆ ತುತ್ತಾಗಿದ್ದರಿಂದ ದಿಕ್ಕುದೆಸೆ ಇಲ್ಲದ ಈತನಿಗೆ ಮುಂಬೈನ ಮಹಿಮ ನಗರದಲ್ಲಿರುವ ಒಂದು ಕುಟುಂಬ ಆಸರೆ ಕೊಡುತ್ತದೆ. ರಕ್ತ ಸಂಬಂಧಿಕನಲ್ಲದ, ಅವನ ಯಾವುದೇ ಹಿನ್ನೆಲೆ ತಿಳಿದಿರದ ಅಪರಿಚಿತ ದಿಗೂ ಮಾಮನಿಗೆ ಆಧುನಿಕ ಮುಂಬೈ ಮಹಾನಗರದಲ್ಲಿ ಕುಟುಂಬವೊಂದು ತನ್ನ ಮನೆಯ ಆಯಕಟ್ಟಿನ ಜಾಗದಲ್ಲಿ ಊಟ, ತಿಂಡಿ, ನಿದ್ರೆಗೆ ಅವಕಾಶ ಮಾಡಿಕೊಟ್ಟು ಅವನನ್ನು ನೋಡಿಕೊಳ್ಳುವುದು ಮನುಷ್ಯ ಸಂಬಂಧಗಳ ದೃಷ್ಟಿಯಿಂದ ಗಮನ ಸೆಳೆಯುತ್ತದೆ. ಕಥೆಯ ಕುತೂಹಲಕರ ಸಂಗತಿಯೆಂದರೆ ದಿಗುಮಾಮನಿಗೆ ತಾನು ಇನ್ನೇನು ಮೂರು ತಿಂಗಳುಗಳಲ್ಲಿ ಸಾಯುವವನಿದ್ದೇನೆಂದು ತಿಳಿದಾಗ ಆ ಮುಂಬೈ ಮಹಾನಗರದಲ್ಲಿ ಎಷ್ಟೋ ವರ್ಷಗಳ ಹಿಂದೆ ತನ್ನ ಸಂಪರ್ಕದಿಂದ ಹೆಣ್ಣೊಬ್ಬಳಲ್ಲಿ ಹುಟ್ಟಿ ಈಗ ಬೆಳೆದು ದೊಡ್ಡವನಾಗಿರಬಹುದಾದ ಮಗನನ್ನು ನೋಡಬೇಕೆಂಬ ಹಂಬಲ ಕಾಡುತ್ತದೆ. " **1960**ರಲ್ಲಿ ನಾನು ಯಾವುದೋ ಕೆಲಸಕ್ಕೆಂದು ಮುಂಬೈಗೆ ಬಂದಿದ್ದೆ. ಆಗ ಹೇಗೋ ಎರಡು ದಿನ ಶಿರೋಡ್ಕರ್ ಎಂಬವರ ಮನೆಯಲ್ಲಿದ್ದೆ. ನನ್ನನ್ನು ನಂಬು ಆಗ ಆ ಎರಡು ದಿನಗಳಲ್ಲಿ ಆ ಶಿರೋಡ್ಕರನ ಹೆಂಡತಿಯೊಂದಿಗೆ ಸ್ವರ್ಗ ಸುಖ ಪಡೆದೆ. ಅವರಿಗೆ ಮಕ್ಕಳಿರಲಿಲ್ಲ. ಅನಂತರ ನಾನು ಕಾರವಾರಕ್ಕೆ ಹೋದೆ.. ಆದರೆ ಈಗಿತ್ತಲಾಗಿ ನನ್ನ ಕೊನೆಯ ದಿನಗಳು ಸಮೀಪಿಸುತ್ತಿರುವುದರಿಂದ ಚಿತ್ರ-ವಿಚಿತ್ರ ಉದ್ವಿಗ್ನತೆಗಳು ಉಂಟಾಗಿವೆ. ಆ ಎರಡು ದಿನಗಳಲ್ಲಿ ನನ್ನಿಂದ ನನ್ನ ನೆಪದಿಂದ ಅವಳಿಗೆ ಮಗುವೊಂದು ದೊರಕಿದ್ದಿರಬಹುದೇ? ಎಂಬ ವಿಚಿತ್ರ ಆಸೆ ಕಾಡತೊಡಗಿದೆ. ನನ್ನ ಮಗು ಇದ್ದಿದ್ದರೆ . ನಂತರ ಮಾತು ನಿಲ್ಲಿಸಿಬಿಟ್ಟ. "ೕ ಎಂದು ದಿಗೂಮಾಮ ಕಥೆಯ ನಿರೂಪಕ ಸದಾನಂದನೊಂದಿಗೆ ತನ್ನ ಮನದಿಂಗಿತವನ್ನು ಹೇಳಿಕೊಳ್ಳುತ್ತಾ, ಚಡಪಡಿಸುವ ಸನ್ನಿವೇಶವು ಆಧುನಿಕತೆಯ ಪ್ರಭಾವದಿಂದ ಮನುಷ್ಯ ಸಂಬಂಧಗಳಲ್ಲಾದ ಪಲ್ಲಟಗಳ ಸೂಚಕವಾಗಿದೆ.

ಆಧುನಿಕತೆಗೆ ತೆರೆದುಕೊಂಡಿರುವ ಮಹಾನಗರಗಳಲ್ಲಿ ಮನುಷ್ಯ ಸಂಬಂಧಗಳು ಕ್ಷೀಣಿಸಿವೆಯೆಂಬ ಸಾಮಾನ್ಯ ಅಭಿಪ್ರಾಯಗಳಿಗೆ ಅಪವಾದವೆಂಬಂತೆ ಇವರ 'ಕಣ್ಣಿಗೊಂದು ಕ್ಷಿತಿಜ' ಕಥೆ ವಿಶಾಲ ಹೃದಯವಂತಿಕೆಯ ಮಾನವ ಸಂಬಂಧಗಳಿಗೆ ಸಾಕ್ಷಿಯಾಗಿದೆ. ' ನನಗೊಂದು ನೌಕರಿ ಕೊಡಿಸಿ ಭಾವ' ಎಂದು ನಿರೂಪಕನ ಮನೆಗೆ ಬಂದು ಸೇರಿಕೊಂಡು ಆಶ್ರಯ ಪಡೆದ ಸುನೀಲ ನಾಲ್ಕೇ ನಾಲ್ಕು ವರ್ಷಗಳಲ್ಲಿ ಆ ಮನೆಯ ಅವಿಭಾಜ್ಯ ಅಂಗವಾಗಿ ಬಿಡುತ್ತಾನೆ. ನಿರೂಪಕ ಹಾಗೂ ಅವನ ಹೆಂಡತಿ ಕುಸುಮ ಇಬ್ಬರೂ ನಗರದಲ್ಲಿ ಉದ್ಯೋಗಸ್ಥರಾದ್ದರಿಂದ ಆ ಮನೆಯ ಎಲ್ಲಾ ಕೆಲಸಗಳನ್ನು ನಿರ್ವಹಿಸುತ್ತಾನೆ. ಹೀಗೆ ಮನೆಯಲ್ಲಿ ಇಬ್ಬರಿಗೂ ಆಪ್ತನಾಗಿದ್ದ ಸುನೀಲ ಆತ್ಮಹತ್ಯೆಗೆ ಶರಣಾದಾಗ ನಿರೂಪಕ ಹಾಗೂ ಕುಸುಮ ಕುಟುಂಬದ ಸದಸ್ಯನೊಬ್ಬನನ್ನು ಕಳೆದುಕೊಂಡಷ್ಟೇ ಸಂಕಟಪಡುತ್ತಾರೆ. " ಸುನೀಲನ ಸಾವಿನ ನಂತರ ಅಂದರೆ ಕಳೆದ ಒಂದುವರೆ ತಿಂಗಳಿಂದ ಯಾರನ್ನು ಕಂಡರೂ ನನ್ನನ್ನೇ ಅರಸಿಕೊಂಡು ಬಂದಂತೆ ಅನಿಸುತ್ತಿತ್ತು. ಇಷ್ಟು ದಿನ ಮನೆಗೆ ಯಾರೇ ಬಂದರೂ ಅವರ ಜೊತೆ ನನ್ನಂತೆ ಕೂತು ಘಟನೆಯ ಎಲ್ಲ ಮಗ್ಗುಲುಗಳನ್ನು ರುಚಿಕಟ್ಟಾಗಿ ವರ್ಣಿಸಿ, ಕಾಫಿ ಗೀಫಿ ಮಾಡಿಕೊಟ್ಟು ಕೂರುತ್ತಿದ್ದ ಕುಸುಮ ಈಗ ತನ್ನ ಪಾಡಿಗೆ ತಾನಿರುತ್ತಾಳೆ ಒಮ್ಮೊಮ್ಮೆ ಸುನೀಲ ನನ್ನ ಕಡೆಯ ಸಂಬಂಧವ್ವೋ ಅಥವಾ ಕುಸುಮಾಳ ಕಡೆಯ ಸಂಬಂಧವ್ವೋ ಎಂಬ ವಿಚಿತ್ರ ಗೋಜಲಾದಂತಾಗಿ ತಬ್ಬಿಬ್ಬಾಗುತ್ತದೆ. ಆಗೆಲ್ಲ ತುಂಬಾ ಜಾಣತನ ವಹಿಸಿ ಆ ತಬ್ಬಿಬ್ಬಿನಿಂದ ಹೊರ ಬರುತ್ತೇನೆ ನಾನು " ৯ ಎನ್ನುವ ನಿರೂಪಕನ ಮಾತುಗಳು ಆಧುನಿಕ ಮಹಾನಗರಗಳಲ್ಲಿಯೂ ಮನುಷ್ಯ ಸಂಬಂಧಗಳ ಜೀವಂತಿಕೆಯನ್ನು ಸೂಚಿಸುತ್ತದೆ. ಉತ್ತರ ಕನ್ನಡ ಜಿಲ್ಲೆಯ ತದಡಿಯಿಂದ ತಾನು ಸುನಿಲನ ಸಂಬಂಧಿಯೆಂದು ಹೇಳಿಕೊಂಡು ಬಂದ ಶಂಕರಬಾಪ್ಪ ಹಾಗೂ ಕುಸುಮಾಳ ಸಂಬಂಧಿಯಾದ ಕೌಸಲ್ಯಳ ಗಂಡ ಇಬ್ಬರೂ ಸೇರಿ ಮರಣ ಹೊಂದಿದ ಸುನೀಲನ ಆಫೀಸಿನಿಂದ ಅವನಿಗೆ ಸೇರಬೇಕಾದ ಫಂಡು, ಸೇವಿಂಗ್ಸ್, ಪರಿಹಾರಗಳನ್ನು ಪಡೆಯಲು ಪ್ರಯತ್ನಿಸಿದಾಗ ನಿರೂಪಕನಿಗೆ ಅವರ ಬಗ್ಗೆ ಬೇಸರವೆನಿಸುತ್ತದೆ. ತಾನು ಏನನ್ನು ನಿರೀಕ್ಷಿಸದೆ ಏನಾದರೂ ಹಣ ಸಿಗುವುದಿದ್ದರೆ ಅವರಿಗೆ ಸಿಗಲಿಯೆಂದು ಅವರೊಂದಿಗೆ ಅವನ ಆಫೀಸಿಗೆ ಹೋಗಿ ಪ್ರಯತ್ನಿಸುತ್ತಾನೆ. ಹೀಗೆ ನಿಸ್ವಾರ್ಥ ಮನುಷ್ಯ ಸಂಬಂಧವೊಂದರ ನಿರೂಪಣೆಯನ್ನು ಈ ಕಥೆಯಲ್ಲಿ ನೋಡಬಹುದಾಗಿದೆ. ಇವರ ಇದೇ ಸಂಕಲನದ ಇನ್ನೊಂದು ಕಥೆ 'ಆರೋಹ' ದಲ್ಲಿ ರಕ್ತ ಸಂಬಂಧಕ್ಕಿಂತ ಮಿಗಿಲಾದ ಮನುಷ್ಯ ಸಂಬಂಧಗಳ ಅನನ್ಯತೆ ಅಭಿವ್ಯಕ್ತಗೊಂಡಿದೆ. ಕಥೆಯ ಮುಖ್ಯ ಪಾತ್ರಗಳಾದ ಅಂಜಲಿ ಮತ್ತು ಅಂಗದ ಇಬ್ಬರೂ ಮುಂಬೈ ಮಹಾನಗರದಲ್ಲಿ ಉದ್ಯೋಗಸ್ಥರು. ಇವರ ಮಗಳು ಪೂರ್ವಿಯನ್ನು ನೋಡಿಕೊಳ್ಳಲು ಊರಿನಿಂದ ಕರೆದುಕೊಂಡು ಬಂದ ಹುಡುಗಿ ತುಳಸಿ ಈ ದಂಪತಿಗಳಿಗೆ ಅನ್ಯಳಾಗದೆ ಅಥವಾ ಮನೆ ಕೆಲಸದವಳಾಗದೆ ಪೂರ್ವಿಯ ಹಾಗೆ ಇನ್ನೋರ್ವ ಮಗಳಾಗಿ ಈ ದಂಪತಿಗಳ ಮನಸ್ಸಿನಲ್ಲಿ ಸ್ಥಾನ ಪಡೆಯುತ್ತಾಳೆ. ಒಮ್ಮೆ ತುಳಸಿ ಇಬ್ಬರಿಗೂ ಹೇಳದೆ ಮನೆ ಬಿಟ್ಟು ಹೋದಾಗ ದಂಪತಿಗಳಿಬ್ಬರೂ ಮಗಳನ್ನೇ

ಕಳೆದುಕೊಂಡ ಸಂಕಟವನ್ನು ಅನುಭವಿಸುತ್ತಾರೆ. “ ತುಳಸಿಗೆಂದು ನಾವು ಪಟ್ಟ ಶ್ರಮ, ಕಡ್ಡಾಯದಂತಿದ್ದ ಅವಳ ಕುರಿತಾದ ಪಾಲಕ ವೃತ್ತಿ ಕ್ರಮೇಣ ಶ್ರದ್ಧೆಯಾದ ರೀತಿ, ಅವಳ ಮನವೊಲಿಸಿ ಇಲ್ಲಿಗೆ ಕರೆತಂದದ್ದು, ಅವರಿವರ ಮನೆಯಲ್ಲಿ ಹೋಗಿ ಟಿವಿ ನೋಡುತ್ತಿದ್ದ ಅವಳ ಹಪಾಹಪಿಯನ್ನು ನೋಡಿ ಅವಳಗಾಗಿ ನಾವು ಟಿ.ವಿ ತಂದದ್ದು, ಅವಳಿಗೆ ಓದು-ಬರಹ ಕಲಿಸಬೇಕೆಂದು ತಾನು ಅಂಜಲಿ ಪ್ರತಿವಾರ ಕೆಲ ವೇಳೆ ಒಡಾಡಿದ್ದು ಇವೆಲ್ಲವೂ ಅಂಗದನಿಗೆ ನೆನಪಾಗಿ ತುಳಸಿ ಮನೆ ಬಿಟ್ಟು ಹೋದಳೆಂದು ವಿಚಿತ್ರ ನೋವು ಉಂಟಾಯಿತು. ಅವಳ ಕುರಿತಾದ ತನ್ನ ಅಕ್ಕರೆ ಎಷ್ಟೋ ಸಲ ಅಂಜಲಿಯ ರೇಗಿಗೆ ಕಾರಣವಾದದ್ದೂ ಇತ್ತು. ತುಳಸಿಯ ಕುರಿತಾದ ಅಂಗದನ ಮಮತೆಯು ಪೂರ್ವಿಗೂ ಸೇರಬೇಕಾದದ್ದೆಂಬ ವಿಚಿತ್ರ ತರ್ಕ ಅಂಜಲಿಯದಾಗಿರುತ್ತಿತ್ತು.. “ ೩ ಎನ್ನುವಲ್ಲಿ ತುಳಸಿ ಇಲ್ಲದ ಆ ಕುಟುಂಬದ ಸಂಕಟ ಮನ ಕಲಕುವಂತೆ ಚಿತ್ರತವಾಗಿದೆ. ಹಾಗೆಯೇ ಮಗಳನ್ನು ದೂರದ ಮುಂಬೈಗೆ ಕಳಿಸಿಕೊಟ್ಟು, ಊರಿನಲ್ಲಿ ಮಗಳ ನೆನಪಿನಲ್ಲೇ ಕಾಲ ಕಳೆಯುವ ತಾಯಿ ಬಂಗಾರಿ ಹಾಗೂ ಹುಟ್ಟಿದ ಆರಂಭದಿಂದಲೂ ಮಗಳಿಂದ ದೂರವಿದ್ದ ತಂದೆ ಭಾಸ್ಕರ ಶೆಟ್ಟಿ ಮುಂಬೈಯಲ್ಲಿ ತಾನು ಹಲವು ವರ್ಷಗಳಿಂದ ದುಡಿದ ಹಣ, ಆಸ್ತಿ ಎಲ್ಲವೂ ಮಗಳು ತುಳಸಿಗೆ ಸೇರಬೇಕೆಂದು ಅಪೇಕ್ಷಿಸುವುದು ಇವೆಲ್ಲವನ್ನೂ ನೋಡಿದಾಗ ಇಡೀ ಕಥೆ ಆಧುನಿಕತೆಯ ಆವರಣದಲ್ಲಿ ಮನುಷ್ಯ ಸಂಬಂಧಗಳ ಆಪ್ತತೆಯನ್ನು ಮರೆದಿರುವುದರ ಅನುಭವವಾಗುತ್ತದೆ.

ಜಯಂತ್ ಕಾಯ್ಕಿಣಿ ಅವರ 'ಅಮೃತಬಳ್ಳಿ ಕಷಾಯ' ಕಥೆಯ ಮಾಯಿ ಮುಂಬೈ ಮಹಾನಗರದಲ್ಲಿ ಆಧುನಿಕತೆಯ ಆವರಣದಲ್ಲಿ ಬದುಕು ಕಟ್ಟಿಕೊಂಡ ಸಾಮಾನ್ಯ ಮಧ್ಯಮ ವರ್ಗದ ಮಹಿಳೆ. ಆದರೆ ಈಕೆ ಯಾವುದೇ ನಿರೀಕ್ಷೆಗಳಿಲ್ಲದೆ , ಜಾತಿ-ಧರ್ಮ-ಮತಗಳನ್ನು ನೋಡದೆ ಸದಾ ಪರೋಪಕಾರಕ್ಕಾಗಿ ದುಡಿಯುವ ಮಹಾನ್ ಮಾನವತಾವಾದಿಯಾಗಿ ಮನುಷ್ಯ ಸಂಬಂಧದ ನಿಜವಾದ ಹೃದಯವಂತಿಕೆಗೆ ಸಾಕ್ಷಿಯಾಗುತ್ತಾಳೆ. ಮಗ ಗಂಗಾಧರ ಹುಟ್ಟಿದಾಗ ತನ್ನ ಎದೆ ಹಾಲನ್ನು ಕೇವಲ ಮಗನಿಗೆ ಮಾತ್ರವಲ್ಲದೆ ಆ ಆಸ್ಪತ್ರೆಯಲ್ಲಿ ಹಾಲಿಲ್ಲದ ಎಷ್ಟೋ ಶಿಶುಗಳಿಗೆ ಉಣಿಸುತ್ತಾಳೆ. ಆಸ್ಪತ್ರೆಯಿಂದ ಮನೆಗೆ ಬಂದ ನಂತರವೂ ಅವಳು ಮತ್ತೆ ಮತ್ತೆ ಆ ಹೆರಿಗೆ ಆಸ್ಪತ್ರೆಗೆ ಹೋಗಿ ಹಾಲು ಸಾಲದ ಮಕ್ಕಳಿಗೆ ಯಾವುದೇ ಜಾತಿ ಧರ್ಮ ಕುಲದ ಭೇದವಿಲ್ಲದೆ ಹಾಲು ಕುಡಿಸಲು ಮುಂದಾಗುತ್ತಾಳೆ. ಅಮೃತ ಬಳ್ಳಿಯನ್ನು ಒಣಗಿಸಿ ಕಷಾಯ ಮಾಡಿ ಬೇರೆ ಬೇರೆ ಆರೋಗ್ಯ ಸಮಸ್ಯೆಗಳಿಂದ ಬಳಲುವವರಿಗೆ ನೀಡುತ್ತಾಳೆ. ಶಹರದ ಆಸ್ಪತ್ರೆಗಳಿಗೆ ಹೋಗಿ ಅಲ್ಲಿ ದಾಖಲಾಗಿರುವ ಬಂಧು-ಬಳಗವಿಲ್ಲದ ಒಂಟಿ ಜೀವಗಳನ್ನು ಹುಡುಕಿ ಅವರಿಗೆ ಗಂಜಿ ಕೊಡುತ್ತಾಳೆ. ಹೀಗೆ ತನ್ನ ಇಡೀ ಜೀವಮಾನವನ್ನು ಪರೋಪಕಾರಕ್ಕಾಗಿ ಮುಡಿಪಾಗಿಡುತ್ತಾಳೆ. ಮುಂಬೈ ಮಹಾನಗರದಲ್ಲಿ ಒಮ್ಮೆ ನಡೆದ ಕೋಮು ಗಲಭೆ ಮನುಷ್ಯ ಸಂಬಂಧಗಳ ದೃಷ್ಟಿಯಿಂದ ಕಥೆಯಲ್ಲಿ ವಿಶೇಷ ಗಮನ ಸೆಳೆಯುತ್ತದೆ. ಕೋಮು ಗಲಭೆಗೆ ಇಡೀ

ಮುಂಬೈ ನಗರವೇ ಸ್ತಬ್ಧವಾಗುತ್ತದೆ. ಕೊಲೆ-ಇರಿತಗಳಿಗೆ ಜನ ತುತ್ತಾಗುತ್ತಾರೆ. ದಿನೇ ದಿನೇ ಆಸ್ಪತ್ರೆ ಸೇರುವವರ ಸಂಖ್ಯೆ ಜಾಸ್ತಿ ಆಗುತ್ತದೆ. ಜನ ಹೊರಗಡೆಯಲ್ಲಿ, ಆಸ್ಪತ್ರೆಗಳಲ್ಲಿ ತಮ್ಮ ಹೆಸರುಗಳನ್ನು ಹೇಳಿಕೊಳ್ಳದ ಸ್ಥಿತಿ ನಿರ್ಮಾಣವಾಗುತ್ತದೆ. ಇಂತಹ ಸಂದರ್ಭದಲ್ಲಿ ಮಾಯಿ ಪ್ರತಿನಿತ್ಯ ಆಸ್ಪತ್ರೆಯಲ್ಲಿ ಸೇರಿದ ಗಾಯಾಳುಗಳನ್ನು ಯಾವ ಕೋಮಿನವನೆನ್ನುವುದನ್ನು ತಿಳಿಯದೆ ಆರೈಕೆ ಮಾಡಿ ಮಾನವೀಯತೆ ಮೆರೆಯುತ್ತಾಳೆ. " ಮನೆಗೆ ಬಂದರೆ ಮಾಯಿ ದೊಡ್ಡ ದೊಡ್ಡ ಎರಡು ಉಗ್ಗಗಳಲ್ಲಿ ಗಂಜಿ ತುಂಬಿಕೊಳ್ಳುತ್ತಿದ್ದಳು. ಥರ್ಮಸಿನಲ್ಲಿ ಕಷಾಯ ತುಂಬಿಸುತ್ತಿದ್ದಳು. ' ನಾನು ರಾತ್ರಿ ಬರುವುದಿಲ್ಲ ಜೆಜೆ ಆಸ್ಪತ್ರೆಗೆ ಹೋಗುತ್ತಿದ್ದೇನೆ. ಅಲ್ಲೊಬ್ಬ ನಿನ್ನದೇ ವಯಸ್ಸಿನವನಿದ್ದಾನೆ. ಪೇಷಂಟ್ ನಂಬರ್ – ೨೧೩೨. ವಾರದ ಹಿಂದೆಯೇ ಅಡ್ಮಿಟ್ ಆದವನು , ಎಂಥ ಕೇಸ್ ಎಂದರೆ ಹದಿಮೂರು ಇರಿತಗಳಿದ್ದವೆಂದು ದಾದಿ ಹೇಳುತ್ತಿದ್ದಳು. ಮೂರು ಫ್ರ್ಯಾಕ್ಚರ್, ತಲೆಯಲ್ಲೂ ಒಂದು . ಎರಡು ಗಂಟೆ ರಕ್ತ ಸೋರಿ ಹೋದ ಮೇಲೆ ಯಾರೋ ಆಸ್ಪತ್ರೆಗೆ ತಂದು ಹಾಕಿದರಂತೆ ' ಎಂದು ಹೇಳುತ್ತಾ ಮಾಯಿ ಮಗ ಗಂಗಾಧರನ ಪೈಜಾಮ, ಅಂಗಿಯೊಂದನ್ನು ಚೀಲದಲ್ಲಿ ಹಾಕಿಕೊಂಡಳು. 'ನಾನು ಅಲ್ಲಿ ಇವತ್ತು ಇದ್ದಿರದಿದ್ದರೆ ಹೊಸ ಅಡ್ಮಿಶನ್ಗೆ ಜಾಗ ಇಲ್ಲವೆಂದು ಅವನನ್ನು ಹಾಗೇ ಡಿಸ್ಚಾರ್ಜ್ ಮಾಡುತ್ತಿದ್ದರೋ ಏನೋ ಗೋರಿಯಂತಹ ಈ ಶಹರದಲ್ಲಿ ಎಲ್ಲಿ ಹೋಗಬೇಕು ಆ ಕಂದ' ಎಂದಳು . " ೬ ಎಂದು ಸಾಗುವ ಕಥೆಯ ಈ ವಿವರಗಳಲ್ಲಿ ಒಂದೆಡೆ ಮನುಷ್ಯ ಸಂಬಂಧಗಳಿಗೆ ಕಿಂಚಿತ್ತೂ ಬೆಲೆಯಿಲ್ಲದೆ ಧರ್ಮದ ಕಾರಣಕ್ಕಾಗಿ ಮನುಷ್ಯರನ್ನು ಕೊಲ್ಲುವ, ಇರಿಯುವ ಹಿಂಸಾತ್ಮಕ ಕೃತ್ಯದಲ್ಲಿ ಮನುಷ್ಯ ತೊಡಗಿದ್ದರೆ, ಇನ್ನೊಂದೆಡೆ ಮಾಯಿಯಂತಹ ಹೃದಯವಂತರು ಜಾತಿ-ಧರ್ಮದಂತಹ ಕೋಮು ಭಾವನೆಗಳನ್ನು ಮೀರಿದ ಮನುಷ್ಯತ್ವ, ಮಾನವೀಯತೆಗೆ ಸಾಕ್ಷಿಯಾಗುವ ಚಿತ್ರಣ ಕಥೆಯಲ್ಲಿ ಗಮನ ಸೆಳೆಯುತ್ತದೆ.

ಇವರ 'ದಿಟ್ಟಿಬೊಟ್ಟು' ಕಥೆಯ ಕೆ.ಕೆ ಮಾಸ್ತರ್ ತನ್ನ ಎಳವೆಯಿಂದಲೂ ಎಡಪಂಥೀಯ ಚಳುವಳಿಗಳಲ್ಲಿ ಉಗ್ರರಾಗಿದ್ದರೂ ಟಾಗೋರರ ಶಾಂತಿನಿಕೇತನದ ಸ್ಪರ್ಶದಿಂದ ಅವರಲ್ಲಿ ಹೊಸ ಬೆಳಕು ಗೋಚರಿಸುತ್ತದೆ. ಆಧುನಿಕ ಮುಂಬೈ ಮಹಾನಗರದ ಕೊಳೆಗೇರಿಗಳಲ್ಲಿ ಬದುಕುತ್ತಿರುವ ನತದೃಷ್ಟ ಮಕ್ಕಳಿಗೆ ಕಲಾ ಶಿಕ್ಷಣವನ್ನು ಹೇಳಿಕೊಡಲು ಪ್ರಾರಂಭಿಸುತ್ತಾರೆ. ಅಲ್ಲಿನ ಮಕ್ಕಳನ್ನು ಪ್ರೋತ್ಸಾಹಿಸುತ್ತಾ ಅವರಲ್ಲಿ ಉತ್ಸಾಹ ಮೂಡಿಸಿ ತನ್ನ ಪ್ರತಿಭೆ-ವಿದ್ಯೆಯನ್ನು ಯಾವುದೇ ಪ್ರತಿಫಲ ಅಪೇಕ್ಷೆಯಿಲ್ಲದೆ ಧಾರೆ ಎರೆಯುತ್ತಾರೆ. ಸಾವಿರಾರು ನತದೃಷ್ಟ ಮಕ್ಕಳ ಪಾಲಿಗೆ ಬೆಳಕಾದ ಕೆ.ಕೆ ತನ್ನ ವಯೋಸಹಜ ಕಾಯಿಲೆಯಿಂದ ಆಸ್ಪತ್ರೆ ಸೇರಿದಾಗ ಅವರು ಅನಾಥರಾಗುವುದಿಲ್ಲ. ಆರ್ಟಿಸ್ಟ ಸೆಂಟರಿನ ಪದಾಧಿಕಾರಿಗಳೆಲ್ಲರೂ ತಮ್ಮ ದೈನಿಕದ ಒತ್ತಡದ ನಡುವೆಯೂ ಕೆ.ಕೆಯವರನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಗಂಜಿ, ನೀರು, ಹಣ್ಣು , ಹಂಪಲುಗಳನ್ನು ತರುತ್ತಾ ಒಬ್ಬರ ಪಾಳಿಯನ್ನು ಇನ್ನೊಬ್ಬರಿಗೆ ವರ್ಗಾಯಿಸಿಕೊಂಡು ಹೇಗೋ ಬಂದು

ಹೋಗುತ್ತಿರುತ್ತಾರೆ. ಕೆ.ಕೆಯವರನ್ನು ನೋಡಲು ರಾಶಿ ರಾಶಿ ಹುಡುಗರು ದಿನ ಬಂದು ಗೇಟಿನ ಹೊರಗೆ ನಿಂತು ಹೋದರೆಂದೂ, ಮೈಯೆಲ್ಲ ಕೊಳಕು ಗಲೀಜಾಗಿರುವ ಈ ಹುಡುಗರನ್ನು ಆಸ್ಪತ್ರೆಯ ಒಳಗಡೆ ಬಿಡುವಂತಿರಲಿಲ್ಲವೆಂದು ನರ್ಸುಗಳು ಹೇಳಿದಾಗ ಕೆ.ಕೆ ಮಾಸ್ತರ್ ತೀವ್ರ ಸಂಕಟಪಡುತ್ತಾರೆ. ತನ್ನೆಲ್ಲ ವಿದ್ಯಾರ್ಥಿಗಳ ಮುಖಗಳನ್ನು ನೆನಪಿಸಿಕೊಂಡು ತಳಮಳಗೊಳ್ಳುತ್ತಾರೆ. ರಾತ್ರಿಯಾದರೆ ಸಾಕು ಆಸ್ಪತ್ರೆಯ ಹೊರಗೆ ಸಾಲಾಗಿ ದಿಟ್ಟಿ ಗೊಂಬೆಗಳಂತೆ ತನ್ನೆಲ್ಲ ಹಳೆ-ಹೊಸ ಮಕ್ಕಳು ಬಂದು ನಿಂತಿದ್ದಾರೆಂಬ ಭ್ರಮೆಯಲ್ಲಿ ಬೀಳುತ್ತಾರೆ. ತನ್ನ ಬಳಿ ಸುಳಿದವರಲ್ಲಿ ಹೊರಗೆ ಯಾರಾದರೂ ಮಕ್ಕಳು ಬಂದು ನಿಂತಿದ್ದಾರಾ? ಹೊರಗೆ ಯಾರಾದರೂ ಮಕ್ಕಳು ಹಿಂಜರಿಯುತ್ತಾ ನಿಂತರೆ ದಯವಿಟ್ಟು ಗದರಿಸಬೇಡಿ. ನನ್ನ ಬಳಿ ಕಳಿಸಿಯೆಂದು ವಿನಮ್ರವಾಗಿ ಕೇಳಿಕೊಳ್ಳುತ್ತಾರೆ. ಸಲೈನ್ ಬಾಟಲಿ ಬದಲಾಯಿಸಲು ಬರುತ್ತಿದ್ದ ವಾರ್ಡ್ ಬಾಯಿ ಕೆ.ಕೆ ಬಗ್ಗೆ ಕಾಳಜಿ ವಹಿಸಿದಾಗ ಈತ ತನ್ನ ಹಳೆಯ ವಿದ್ಯಾರ್ಥಿಯಾಗಿರಲು ಸಾಧ್ಯವೇ ಎಂದು ಯೋಚಿಸುತ್ತಾರೆ. ಹೀಗೆ ಹೆಂಡತಿ, ಮಕ್ಕಳು, ಬಂಧು-ಬಳಗ, ಹೀಗೆ ಯಾರೂ ಇಲ್ಲದಿದ್ದರೂ ಕೆ.ಕೆ ಮಾಸ್ತರರು ಅವರ ವೃದ್ಧಾಪ್ಯದಲ್ಲಿ ಅನಾಥರಾಗುವುದಿಲ್ಲ. ಅವರಿಂದ ಉಪಕಾರ ಪಡೆದ ಅದೆಷ್ಟೋ ಸಂಖ್ಯೆಯ ಜನರು ಅವರ ಸೇವೆಗೆ ಕೈ ಜೋಡಿಸುತ್ತಾರೆ. ತಮ್ಮ ಕೆಲಸದ ಒತ್ತಡಗಳ ನಡುವೆಯೂ ಅವರನ್ನು ನೋಡಿಕೊಳ್ಳಲು ಮರೆಯುವುದಿಲ್ಲ. ಇದು ಆಧುನಿಕ ಮಹಾನಗರಗಳಲ್ಲಿ ಮನುಷ್ಯ ಸಂಬಂಧಗಳು ಇನ್ನೂ ಸಜೀವವಾಗಿ ಉಳಿದಿರುವುದರ ಸೂಚನೆಯಾಗಿದೆ.

ಜಯಂತ್ ಕಾಯ್ಕಿಣಿಯವರ 'ನೀರು' ಕಥೆಯಲ್ಲಿ ಆಧುನಿಕ ಮುಂಬೈ ಮಹಾನಗರದ ಜನಜೀವನದ ಚಿತ್ರಣವಿದ್ದರೂ ಇದರಲ್ಲಿ ಬರುವ ಸಂತೋಷನ್, ಚಂದ್ರಹಾಸ ಹಾಗೂ ಕುಂಜವಿಹಾರಿ ಪಾತ್ರಗಳು ಮನುಷ್ಯ ಸಂಬಂಧದ ದೃಷ್ಟಿಯಿಂದ ಗಮನ ಸೆಳೆಯುತ್ತದೆ. ಈ ಮೂವರು ಅಪರಿಚಿತರಾಗಿದ್ದರೂ ಮುಂಬೈ ಮಹಾನಗರದಲ್ಲಿ ಅನಿರೀಕ್ಷಿತವಾದ ಅವರ ಭೇಟಿ ಅವರನ್ನು ರಕ್ತ ಸಂಬಂಧಕ್ಕಿಂತಲೂ ಮಿಗಿಲಾದ ಬಂಧನದಲ್ಲಿ ಬಂಧಿಸುತ್ತದೆ. ತನ್ನ ವಯೋಸಹಜವಾದ ಅನಾರೋಗ್ಯದ ಕಾರಣ ಸಂತೋಷನ್ ಮಗಳ ಆಶ್ರಯದಲ್ಲಿ ಬೆಂಗಳೂರಿನಲ್ಲಿ ನೆಲೆಸಿರುತ್ತಾನೆ. ಮುಂಬೈಯಲ್ಲಿನ ಖ್ಯಾತ ವೈದ್ಯರೊಬ್ಬರಲ್ಲಿಗೆ ಆಗಾಗ ಆರೋಗ್ಯ ತಪಾಸಣೆಗಾಗಿ ವಿಮಾನದಲ್ಲಿ ತೆರಳುವ ಸಂತೋಷನ್ ಅಂದು ಮಗಳು ಮತ್ತು ಅಳಿಯ ಇಬ್ಬರೂ ಕೆಲಸದ ಒತ್ತಡದಲ್ಲಿದ್ದುದರಿಂದ ಒಬ್ಬನೇ ತೆರಳಬೇಕಾದ ಪರಿಸ್ಥಿತಿ ಬರುತ್ತದೆ. ಆಗ ವಿಮಾನದಲ್ಲಿ ಸಹ ಪ್ರಯಾಣಿಕನಾಗಿ ಸಿಕ್ಕಿದವನೇ ಚಂದ್ರಹಾಸ. ಅಂದು ಪ್ರತಿಕೂಲ ಹವಾಮಾನದಿಂದಾಗಿ ವಿಮಾನವು ನಿಲ್ದಾಣ ತಲುಪುವುದು ತಡವಾಗುತ್ತದೆ. ಇಬ್ಬರೂ ಪರಸ್ಪರ ಮಾತುಕತೆಯಲ್ಲಿ ತೊಡಗುತ್ತಾರೆ. "ಬೇಗ ಹುಷಾರಾಗುತ್ತೀರಿ. ನಿಮ್ಮ ಕಣ್ಣುಗಳೇ ಹೇಳುತ್ತವೆ ಎಂದಾಗ ಸಂತೋಷನ್ ಕೌತುಕದ ಮುಗುಳುನಕ್ಕು ಹೌದೇ?, ನಿಜ ಹೇಳಿ. ನಿಮ್ಮನ್ನು ನಂಬಿ ಬಿಡುತ್ತೇನೆ ನಾನು. ತಮಾಷೆ ನೋಡಿ ಬಿಸಿನೆಸ್ಸಿನಲ್ಲಿದ್ದಾಗ ಯಾರನ್ನೂ ನಂಬುತ್ತಾ

ಇರಲಿಲ್ಲ ನಾನು. ದುಡ್ಡನ್ನಷ್ಟೇ ನಂಬ್ತಾ ಇದ್ದೆ . ಆದರೆ ಕಾಯಿಲೆಯಾದ ಮೇಲೆ ಎಲ್ಲರನ್ನೂ ಕಂಡಪಟ್ಟೆ ನಂಬಲಿಕ್ಕೆ ಶುರು ಮಾಡಿದ್ದೇನೆಂದು ಚಂದ್ರಹಾಸನ ಕೈತಟ್ಟಿ ಸುಮ್ಮನಾದರು " ೫ ಕಥೆಯ ಈ ಸಂಭಾಷಣೆಯ ತುಣುಕಿನಲ್ಲಿ ಹಣದ ಅಮಲು ಹಾಗೂ ಆಧುನಿಕ ವಾಣಿಜ್ಯ, ವ್ಯವಹಾರಗಳ ಜಂಜಡದಲ್ಲಿ ಮನುಷ್ಯ ಸಂಬಂಧಗಳು ಶಿಥಿಲಗೊಂಡಿರುವ ಸುಳಿವಿದೆ. ಅಲ್ಲದೇ ಆಧುನಿಕತೆಯ ಆವರಣದಲ್ಲಿ ಬದುಕು ಕಟ್ಟಿಕೊಂಡ ಮನುಷ್ಯನಿಗೆ ಹಣ, ವ್ಯವಹಾರ, ಲಾಭಗಳಿಕೆಯಷ್ಟೇ ಮುಖ್ಯವಾಗುತ್ತದೆ. ಆದರೆ ಜೀವನದ ಅಶಾಶ್ವತತೆಯ ಅರಿವಾದಾಗ ಮನುಷ್ಯ ಸಂಬಂಧಗಳು ಎಷ್ಟು ಮುಖ್ಯವಾಗುತ್ತದೆನ್ನುವ ತಾತ್ವಿಕತೆಯನ್ನು ಧ್ವನಿಸುತ್ತವೆ. ವಿಮಾನ ಲ್ಯಾಂಡ್ ಆದ ಬಳಿಕ ಸಂತೋಷನ್ ಒಬ್ಬರನ್ನೇ ಬಿಟ್ಟು ತೆರಳದ ಚಂದ್ರಹಾಸ ನಿಮ್ಮನ್ನು ಆಸ್ಪತ್ರೆಯವರೆಗೂ ಟ್ಯಾಕ್ಸಿಯಲ್ಲಿ ಡ್ರಾಪ್ ಮಾಡಿ ಆಮೇಲೆ ನಾನು ತೆರಳುತ್ತೇನೆಂದು ಅವರಿಗೆ ಆಸರೆಯಾಗುತ್ತಾನೆ. ಇಬ್ಬರೂ ಕುಂಜಾವಿಹಾರಿಯ ಟ್ಯಾಕ್ಸಿಯಲ್ಲಿ ಆಸ್ಪತ್ರೆಯ ಕಡೆಗೆ ತೆರಳುತ್ತಾರೆ. ವೈದ್ಯರನ್ನು ಭೇಟಿಯಾಗಿ ಬಂದ ಬಳಿಕ ಹೊರಗಡೆ ವಿಪರೀತ ಮಳೆ ಸುರಿಯುತ್ತದೆ. ಇಡೀ ಮಹಾನಗರವೇ ಕೊಚ್ಚಿ ಹೋಗುವಂತಹ ಮಹಾಮಳೆಯ ಕಾರಣಕ್ಕೆ ಟ್ರಾಫಿಕ್ ಅಸ್ತವ್ಯಸ್ತವಾಗುತ್ತದೆ. ಇಂತಹ ಸಂದರ್ಭದಲ್ಲಿ ಸಂತೋಷನ್ ಅವರನ್ನು ಹೇಗಾದರೂ ಮಾಡಿ ವಿಮಾನ ನಿಲ್ದಾಣದವರೆಗೆ ಡ್ರಾಪ್ ಮಾಡಿ ಬರಲು ಚಂದ್ರಹಾಸ ಹಾಗೂ ಕುಂಜಾಬಿಹಾರಿ ಹೆಣಗಾಡುತ್ತಾರೆ. ಆದರೆ ವಿಪರೀತ ಟ್ರಾಫಿಕ್ ಜಾಮಿನಿಂದ ಇದು ಸಾಧ್ಯವಾಗುವುದಿಲ್ಲ. ಊಟ, ತಿಂಡಿಯಿಲ್ಲದೆ ದಣಿದಿದ್ದ ಸಂತೋಷನ್ ಹಾಗೂ ಚಂದ್ರಹಾಸರಿಗೆ ಡ್ರೈವರ್ ಕುಂಜವಿಹಾರಿ ಅಲ್ಲೇ ಗಲ್ಲಿಯೊಂದರಲ್ಲಿದ್ದ ತನ್ನ ಸ್ನೇಹಿತನೊಬ್ಬನ ಸಂಬಂಧಿಕರ ಮನೆಯಲ್ಲಿ ರೊಟ್ಟಿ ಊಟ ಕೊಡಿಸುತ್ತಾನೆ. " ನೀನು ಇವತ್ತು ತಿನ್ನಿಸಿದ ರೊಟ್ಟಿಗಿಂತ, ಕುಡಿಸಿದ ನೀರಿಗಿಂತ ರುಚಿಯಾದದ್ದನ್ನು ನಾನು ಈ ಜನ್ಮದಲ್ಲೇ ಪಡೆದಿಲ್ಲ ಕುಂಜಭಯ್ಯಾ ಅದು ಅಮೃತ" ಎನ್ನುವ ಸಂತೋಷನ ಮಾತುಗಳು ಮನಕಲಕುತ್ತದೆ. ಒಟ್ಟಿನಲ್ಲಿ ಇಡೀ ಕಥೆ ಮುಂಬೈ ಮಹಾನಗರದಂತಹ ಆಧುನಿಕತೆಯ ಆವರಣದಲ್ಲಿಯೂ ಮನುಷ್ಯ ಸಂಬಂಧಗಳು ಜೀವಂತವಾಗಿರುವುದರ ಚಿತ್ರಣವನ್ನು ಕಟ್ಟಿಕೊಡುತ್ತದೆ. ಇವರ 'ಚಾರ್ಮಿನಾರ್' ಕಥೆಯ ನಾಯಕ ನೈರುತ್ಯ ಹಾಗೂ ಪುನರ್ವಸು ಮೂಲಕ ಕಥೆಯಲ್ಲಿ ತೆರೆದುಕೊಳ್ಳುವ ಅನೇಕ ಸಂಗತಿಗಳು ಮನುಷ್ಯ ಸಂಬಂಧದ ಘನತೆಯನ್ನು ಎತ್ತಿ ಹಿಡಿಯುತ್ತವೆ. ನೈರುತ್ಯ ಎಂಭತ್ತರ ದಶಕದಲ್ಲೇ ಆಣಂದನ್ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ರೂರಲ್ ಮ್ಯಾನೇಜ್ಮೆಂಟಿನಿಂದ ಪದವಿ ಪಡೆದಿದ್ದು, ಆಧುನಿಕ ಮಹಾನಗರಗಳ ಕಾರ್ಪೊರೇಟ್ ಕ್ಷೇತ್ರದಲ್ಲಿ ಅತ್ಯುತ್ತಮ ಹುದ್ದೆಗಳನ್ನು ಅಲಂಕರಿಸುವ ಸಾಕಷ್ಟು ಅವಕಾಶಗಳಿದ್ದರೂ ಅವನ ಮನಸ್ಸು ಈ ಸಮಾಜಕ್ಕೆ ಉಪಯೋಗವಾಗುವ ಕೆಲಸವನ್ನು ಅರಸುತ್ತದೆ. ಬೀಡಿ ಕಾರ್ಮಿಕರ ಏಳಿಗೆ, ಕೈಮಗ್ಗ, ಸೀರೆ ಕಾರ್ಮಿಕರ ಏಳಿಗೆಯ ಬಗ್ಗೆ ಅಧ್ಯಯನ ನಡೆಸುತ್ತಾನೆ. ಆದರೆ ಅಂತಿಮವಾಗಿ ಸಣ್ಣ ಪ್ರಾಯದಲ್ಲಿ ಮನೆ ತೊರೆದು ರೈಲು ಭೋಗಿಗಳಲ್ಲಿ ಸಂಚರಿಸುತ್ತ ಗೇಯ್ಮೆ ಮಾಡುವ ರೈಲು ಮಕ್ಕಳ ಬದುಕನ್ನು ಹಸನುಗೊಳಿಸುವ

ಕಾರ್ಯವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಈ ಸೇವಾ ಕೈಂಕರ್ಯ ಈತನಿಗೆ ಅಪಾರ ನೆಮ್ಮದಿಯನ್ನು ತಂದು ಕೊಡುತ್ತದೆ. ಇವನ ಈ ಕಾರ್ಯಕ್ಕೆ ನೆರವಾಗಿ ಬಂದ ಅವನ ಹೆಂಡತಿ ಪುನರ್ವಸುವಿನೊಂದಿಗೆ ಸೇರಿ ಅನಾಥ ರೈಲು ಮಕ್ಕಳ ಮನೆಗೆಲ್ಲುತ್ತಾ, ಅವರನ್ನು ಒಂದೆಡೆ ಸೇರಿಸುತ್ತಾ, ಅವರಿಗೆ ಸಾಮಾನ್ಯ ಶಿಕ್ಷಣವನ್ನು ನೀಡುತ್ತಾ, ಅವರಿಗೆ ಸುಚಿತ್ವದ ಪಾಠ ಹೇಳಿಕೊಡುತ್ತಾ ಅವರ ಮನಸ್ಸನ್ನು ಪರಿವರ್ತಿಸುವ ತಮ್ಮ ಕಾರ್ಯವನ್ನು ಎಡಬಿಡದೆ ಮುಂದುವರಿಸುತ್ತಾರೆ. ತನ್ನ ಚೊಚ್ಚಿಲ ಹೆರಿಗೆಗೆಂದು ತವರಿಗೆ ಹೋಗಿದ್ದ ಪುನರ್ವಸು ಹೆರಿಗೆಯಾಗಿ ಮೂರು ತಿಂಗಳ ಬಳಿಕ ನೈರುತ್ಯನ ಬಿಡಾರಕ್ಕೆ ಬಂದಾಗ ಅಲ್ಲಿದ್ದ ರೈಲುಮಕ್ಕಳ ಮೇಲೆ ಅವಳು ತೋರಿಸುವ ಕಾಳಜಿ ಕಥೆಯಲ್ಲಿ ವಿಶೇಷ ಗಮನ ಸೆಳೆಯುತ್ತದೆ. " ಮೂರು ತಿಂಗಳ ಮಗುವಿನೊಂದಿಗೆ ತಾಯಿಯ ಗಿರಾನಿಯಲ್ಲಿ ಪುನರ್ವಸು ಬಿಡಾರಕ್ಕೆ ಬಂದಾಗ ಅವನ ದೇಖರೇಖೆಯಲ್ಲಿದ್ದ ಮೂವರು ವೀರಪುತ್ರರು ಓಡಿ ಬಂದು ಪುಟಾಣಿ ಮಗುವನ್ನು ಮುಟ್ಟಿದರು ಮಗುವಿನಂತೆ ಅವಳೂ ಸಹ ತಲೆಗೆ ತನ್ನ ಕರ್ಚಿಫನ್ನೇ ಮಫಲರಿನಂತೆ ಕಿವಿ ಮುಚ್ಚುವಂತೆ ಕಟ್ಟಿಕೊಂಡಿದ್ದು ನೋಡಿ ನೈರುತ್ಯನಿಗೆ ಪಾಪ ಅನಿಸಿತು. ನೆಲದ ಮೇಲೆ ಹಾಸಿದ್ದ ಚಾಪೆಯ ಮೇಲೆ ಅವಸರದಲ್ಲಿ ಬಟ್ಟೆ ಹಾಸಿ ಮಗುವನ್ನು ಮಲಗಿಸಿದರು. ವೀರಪುತ್ರರ ಮುಖಗಳೆಲ್ಲ ಹೊಸದಾಗಿದ್ದವು. ಈ ಅವಧಿಯಲ್ಲಿ ನೈರುತ್ಯನ ಕೆಲಸವೂ ಜೋರಾಗಿತ್ತು. ಅವನು ತಾನು ಪುನರ್ವಸತಿ ಕಲ್ಪಿಸಿ ಮನೆಗೆ ಮರಳಿಸಿದ ತರುಣರನ್ನೇ ಸ್ವಯಂಸೇವಕರನ್ನಾಗಿಸಿಕೊಂಡು ಬಳಸಿಕೊಳ್ಳತೊಡಗಿದ್ದ ಆದರೂ ಪ್ರತಿ ಸಂಜೆ ಪ್ರಾರ್ಥನೆಯ ಪರಿಪಾಠ ಸರಿಯಾಗಿ ನಡೆದಿಲ್ಲವೆಂದು ಪುನರ್ವಸು ರೇಗಿದಳು. ಮಕ್ಕಳ ಉಗುರುಗಳನ್ನು ಯಾಕೆ ತೆಗೆದಿಲ್ಲವೆಂದು ನೈರುತ್ಯನನ್ನ ತರಾಟೆಗೆ ತೆಗೆದುಕೊಂಡಳು. ನಂತರ ನೈರುತ್ಯನ ಶೇವಿಂಗ್ ಕಿಟ್ಟಿನೊಳಗಿನ ನೇಲ್ ಕಟರಿನಿಂದ ಅವರೆಲ್ಲರ ಉಗುರುಗಳನ್ನು ತೆಗೆದಳು. ಹಿಂಜರಿಕೆಯಿಂದಲೇ ತಮ್ಮ ಕೈ ಬೆರಳುಗಳನ್ನು ಮುಂದೆ ಮಾಡಿದ ಕೆದರಿದ ಕೂದಲ ಪೋರರು ತಮ್ಮ ಹೆದರಿದ ಕಣ್ಣುಗಳಿಂದ ದೇವರನ್ನು ಸಮೀಪದಿಂದ ನೋಡುವಂತೆ ಅವಳನ್ನು ನೋಡಿದರು " ೬ ಇಲ್ಲಿ ತಮಗೆ ಸಂಬಂಧವೇ ಇಲ್ಲದ, ಜಾತಿ-ಧರ್ಮ, ಕುಲ-ಗೋತ್ರ ಏನೂ ತಿಳಿದಿರದ ಬೀದಿಯ ಅನಾಥ ಮಕ್ಕಳ ಜೊತೆಗಿನ ಪುನರ್ವಸು ಹಾಗೂ ನೈಋತ್ಯ ಹೊಂದಿದ್ದ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಮಿಗಿಲಾದ ಮನುಷ್ಯ ಸಂಬಂಧದ ಅನನ್ಯತೆಗೆ ಸಾಕ್ಷಿಯಾಗುತ್ತದೆ. ಹಾಗೆಯೇ ಇದೇ ಕಥೆಯಲ್ಲಿ ಬರುವ ನೈರುತ್ಯ ಹಾಗೂ ಆತನ ಗೆಳೆಯ ಹೇಮಚಂದ್ರನ ಸ್ನೇಹ ಸಂಬಂಧವೂ ಸಹ ಮನುಷ್ಯ ಸಂಬಂಧದ ಹಿನ್ನಲೆಯಲ್ಲಿ ಗಮನ ಸೆಳೆಯುತ್ತದೆ. ಹೇಮಚಂದ್ರ ಮತ್ತು ಅವನ ಹೆಂಡತಿ ಆಧುನಿಕ ಕಾರ್ಪೋರೇಟ್ ಕ್ಷೇತ್ರದಲ್ಲಿ ಬದುಕು ಕಟ್ಟಿಕೊಂಡು, ಐಶಾರಾಮಿ ಜೀವನ ಶೈಲಿಗೆ ಒಗ್ಗಿಕೊಂಡರೂ ನೈರುತ್ಯನ ಸಾಮಾನ್ಯ ಬದುಕನ್ನು ಗೌರವಿಸುತ್ತಾರೆ. ನೈರುತ್ಯ ಮದುವೆಯಾದ ಹೊಸದರಲ್ಲಿ ಹೇಮಚಂದ್ರ ಹಾಗೂ ಅವನ ಹೆಂಡತಿ ಸ್ಕಾರ್ಪಿಯೋ ಕಾರಿನಲ್ಲಿ ನೈರುತ್ಯನ ಸಾಮಾನ್ಯ ಬಿಡಾರಕ್ಕೆ ಬಂದು ಅವನೊಂದಿಗೆ ಸಾಮಾನ್ಯ ವ್ಯಕ್ತಿಯಾಗಿ ಒಂದು ದಿನ ಕಳೆಯುತ್ತಾರೆ. ಹಾಗೆಯೇ ಹೈದರಾಬಾದಿನಲ್ಲಿ ಐಷಾರಾಮಿ ಪ್ಲಾಟಿನಲ್ಲಿದ್ದ

ಹೇಮಚಂದ್ರನ ಮನೆಗೆ ನೈರುತ್ಯ ಹೋದಾಗ ಅವನ ಮಗನನ್ನು ಮುದ್ದಾಡುತ್ತಾನೆ. ನಂತರ ಏನೋ ಮನಸ್ಸಿಗೆ ಹೊಳೆದಂತಾಗಿ ಮುಜುಗರದಿಂದಲೇ ನೂರರ ನೋಟೊಂದನ್ನು ತೆಗೆದು ಮಡಚಿ ಹೇಮಚಂದ್ರನ ಮಗನ ಕೈಗೆ ನೀಡುತ್ತಾನೆ. ಮಗುವಿನ ಕೈಯಿಂದ ಅದನ್ನು ಬಿಡಿಸಿ ತೆಗೆದುಕೊಂಡ ಹೇಮಚಂದ್ರ "ಇದು ಅಮೂಲ್ಯ ಪ್ರೆಷಸ್.. ಎನ್ಕ್ಯಾಶ್ ಆಗುವಂತದ್ದೇ ಅಲ್ಲ!" ಎಂದು ಅದನ್ನು ಮುತ್ತಿಟ್ಟು ಹೆಂಡತಿಯ ಕೈಗೆ ನೀಡಿ, "ಇದು ದುಡ್ಡಲ್ಲ ಮುಜುಗರ ಪಟ್ಟುಕೋಬೇಡ" ಎಂದು ನೈರುತ್ಯನ ಹೆಗಲು ತಟ್ಟಿದಾಗ ಅವನಿಗೆ 'ಅಬ್ಬ! ಎಷ್ಟು ಒಳ್ಳೆಯ ದೋಸ್ತ ಈತ ' ಎಂಬ ಆಳವಾದ ಸಮಾಧಾನವಾಗುತ್ತದೆ. ಹೀಗೆ ದುಡ್ಡು, ಅಂತಸ್ತು, ಆಸ್ತಿ ಎಲ್ಲವನ್ನು ಮೀರಿದ ಮನುಷ್ಯ ಸಂಬಂಧದ ಪವಿತ್ರ್ಯತೆಗೆ ಹೇಮಚಂದ್ರ ಮತ್ತು ನೈರುತ್ಯರ ಸ್ನೇಹ ಸಂಬಂಧ ಸಾಕ್ಷಿಯಾಗುತ್ತದೆ.

ಕಾಯ್ಕಿಣಿಯವರ 'ಮೃಗನಯನ' ಕಥೆಯಲ್ಲಿ ಕಥೆಗಾರರು ಮನುಷ್ಯ ಸಂಬಂಧದ ಅನನ್ಯತೆಯನ್ನು ವಿಶೇಷವಾಗಿ ಅನಾವರಣಗೊಳಿಸಿದ್ದಾರೆ. ಕಥೆಯ ಮುಖ್ಯಪಾತ್ರವಾದ ಹಸ್ತಾಕ್ಷರ ತನ್ನ ಒಂಬತ್ತನೇ ವಯಸ್ಸಿನಲ್ಲಿ ತಾಯಿಯಿಂದ ದೂರವಾಗಿ ತಂದೆ ಹಾಗೂ ಅಜ್ಜಿಯ ಆಶ್ರಯದಲ್ಲಿ ಬೆಳೆಯುತ್ತಾನೆ. ತನ್ನ ಓದಿನ ಬಳಿಕ ಆಧುನಿಕ ಮುಂಬೈ ಮಹಾನಗರಕ್ಕೆ ಬಂದು ಅಲ್ಲಿ ಬದುಕು ಕಟ್ಟಿಕೊಳ್ಳುತ್ತಾನೆ. ಇತ್ತ ಗಾಣಗಾಪುರದಲ್ಲಿ ತನ್ನ ವೃದ್ಧಾಪ್ಯದಲ್ಲೂ ಇಸ್ತ್ರಿ ಮಾಡುವ ಕಾಯಕವನ್ನು ನಿರ್ವಹಿಸುತ್ತಾ ಒಂಟಿಯಾಗಿ ಬದುಕು ಸಾಗಿಸುತ್ತಿದ್ದ ತಂದೆ ದಿಗಂಬರನನ್ನು ಕಣ್ಣಿನ ಶಸ್ತ್ರಚಿಕಿತ್ಸೆಗೆಂದು ಹಸ್ತಾಕ್ಷರ ಮುಂಬೈಗೆ ಕರೆಸಿಕೊಂಡಾಗ ಅಲ್ಲಿ ನಡೆಯುವ ಕೆಲವು ವಿದ್ಯಮಾನಗಳು ಮನುಷ್ಯ ಸಂಬಂಧಗಳ ಹಿನ್ನೆಲೆಯಲ್ಲಿ ಗಮನ ಸೆಳೆಯುತ್ತವೆ. ಮುಂಬೈನಲ್ಲಿ ಹಸ್ತಾಕ್ಷರದೊಂದಿಗೆ ರೂಮ್ ಹಂಚಿಕೊಂಡಿದ್ದ ಇಬ್ಬರು ಗೆಳೆಯರಾದ ದಫ್ತರಿ ಮತ್ತು ಸಾನೆ ಅವರಿರುವ ಖೋಲಿ ಅತಿ ಚಿಕ್ಕದಾದ್ದರಿಂದ ಒಂದು ವಾರದ ಮಟ್ಟಿಗೆ ಹಸ್ತಾಕ್ಷರ ಮತ್ತು ಅವನ ತಂದೆಗೆ ಮನೆಯನ್ನು ಬಿಟ್ಟುಕೊಟ್ಟು ತಾವು ಉಳಿಯಲು ಬೇರೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಮೂವರು ಬ್ರಹ್ಮಚಾರಿಗಳೇ ಇದ್ದ ಆ ಮನೆಯನ್ನು ಗುಡಿಸಿ, ಒರೆಸಿ ಒಪ್ಪ ಓರಣಗೊಳಿಸಲು ಹಸ್ತಾಕ್ಷರನಿಗೆ ನೆರವಾಗುತ್ತಾರೆ. ಕಣ್ಣು ಮಂಜಾಗಿ ಕಾಣಿಸದಿರುವ ಸ್ಥಿತಿ ತಲುಪಿದರೂ ಇನ್ನೂ ಒಂಟಿಯಾಗಿ ಇಸ್ತ್ರಿ ಕಾಯಕ ನಡೆಸಿಕೊಂಡೇ ಇರುವ ಅಪ್ಪನನ್ನು ತಾನು ನಿರ್ಲಕ್ಷ್ಯ ಮಾಡಿದನೇ ಎಂಬ ಮೂಕ ವ್ಯಾಕುಲತೆ ಹಸ್ತಾಕ್ಷರನನ್ನು ಕಾಡುತ್ತದೆ. " ಅಪ್ಪ ಮುಂಬೈಗೆ ಬಂದ ಮೇಲೆ ಅವರ ಶಸ್ತ್ರ ಚಿಕಿತ್ಸೆ ಮುಗಿಸಿ ದೃಷ್ಟಿ ಸಮಸ್ಯೆ ನಿವಾರಿಸಿ ಅವರನ್ನು ಇಡೀ ಮುಂಬೈ ಸುತ್ತಾಡಿಸಬೇಕು, ದಾದರಿನ ಶಿವಾಜಿ ನಾಟ್ಯಮಂದಿರದಲ್ಲಿ ಹಳೆಯ ಸಂಗೀತ ನಾಟಕ 'ಸೌಭದ್ರ' ತೋರಿಸಬೇಕು, ಪೃಥ್ವಿಯಲ್ಲಿ ಜೂಲೂಸ್ ತೋರಿಸಬೇಕು, ಪೀಕ್ ಸಮಯದಲ್ಲಿ ಲೋಕಲ್ ಗಾಡಿಯಲ್ಲಿ ದಕ್ಕಾಮುಕ್ಕಿಯ ನಡುವೆ ಇಳಿಸಿ ಬೆಚ್ಚಿಬೀಳಿಸಬೇಕು, ಸಿಂಧುದುರ್ಗ ಹೋಟೆಲಿನಲ್ಲಿ ಮಾಲಾವಣಿ ಮಟನ್ ಮತ್ತು ಕಾಲಾಘೋಡಾದ ಬಾಗದಾದಿ ಇರಾಣಿ ರೆಸ್ಟೋರೆಂಟಿನ ಎದುರಿನ ಬಡೇಮಿಯಾನ ಕಬಾಬ್ ತಿನ್ನಿಸಬೇಕು, ಗೇಟ್ ವೇ ದಲ್ಲಿ ಲಾಂಛನದಲ್ಲಿ

ಕೂರಿಸಬೇಕು " ೭ ಎಂದು ಏನೇನೋ ಯೋಜನೆಗಳನ್ನು ಹಾಕಿಕೊಳ್ಳುತ್ತಾನೆ. ವಯಸ್ಸಾದ ತಂದೆ ತಾಯಿಗಳಿಗೆ ಬೇಕಾಗಿರುವುದು ಮಕ್ಕಳ ದುಡಿಮೆಯ ಹಣವಲ್ಲ. ಬದಲಾಗಿ ಅವರ ಭಾವನಾತ್ಮಕ ಸ್ಪಂದನೆ ಎನ್ನುವುದನ್ನು ಕಥೆ ಹಸ್ತಾಕ್ಷರ ಹಾಗೂ ಆತನ ತಂದೆ ದಿಗಂಬರನ ಪಾತ್ರಗಳ ಮೂಲಕ ಸೂಚ್ಯವಾಗಿ ಧ್ವನಿಸಿದೆ. ಹಸ್ತಾಕ್ಷರನ ತಂದೆ ಮುಂಬೈನ ದೋಭಿಘಾಟ್ ಒಮ್ಮೆ ನೋಡಬೇಕೆಂಬ ಇಂಗಿತ ವ್ಯಕ್ತಪಡಿಸಿದಾಗ ಹಸ್ತಾಕ್ಷರ ಮತ್ತು ಅವನ ಗೆಳೆಯ ಸಾನೆ ಇಬ್ಬರೂ ಬಾಬನನ್ನು ಕರೆದುಕೊಂಡು ಹೋಗುತ್ತಾರೆ. ನಿಮಿಷಕ್ಕೊಂದು ಲೋಕಲ್ ರೈಲುಗಳು ಹಾದು ಹೋಗುತ್ತಿರುತ್ತವೆ. ಕೆಲಸಕ್ಕೆ ಹೊರಟ ಜನಗಳಿಂದ ಕಿಕ್ಕಿರಿದು ಹೋಗಿದ್ದ ರೈಲೊಂದನ್ನು ಏರುವ ಭರದಲ್ಲಿ ಬಾಬಾನನ್ನು ಮೊದಲು ರೈಲಿಗೆ ಹತ್ತಿಸಿ ನಂತರ ತಾವಿಬ್ಬರೂ ಹತ್ತಿಕೊಳ್ಳುವಷ್ಟರಲ್ಲಿ ರೈಲು ಚಲಿಸಲು ಪ್ರಾರಂಭವಾಗುತ್ತದೆ. ಕಿಕ್ಕಿರಿದ ಜನಸಂದಣಿಯ ನಡುವೆ ರೈಲು ಏರಲು ಸಾಧ್ಯವಾಗದೇ ಇದ್ದಾಗ ಹಸ್ತಾಕ್ಷರ ತಂದೆ ಕಳೆದು ಹೋದ ದುಃಖದಲ್ಲಿ ಅಧೀರತೆಯಿಂದ ಕುಸಿಯುತ್ತಾನೆ. ಮುಂಬೈನ ಪರಿಚಯವೇ ಇಲ್ಲದ ಬಾಬಾ ಎಲ್ಲಿ ಹೋದಾರು? ಎಲ್ಲಿ ರೈಲಿನಿಂದ ಇಳಿದಾರು? ಶಾಶ್ವತವಾಗಿ ಬಾಬಾ ಕಳೆದು ಹೋಗಿಬಿಟ್ಟರೆ..! ಹೀಗೆ ನಾನಾ ಮೂಕ ಭಯ, ಆಲೋಚನೆಗಳು ಹಸ್ತಾಕ್ಷರನನ್ನು ಕಾಡುತ್ತದೆ. ಆದರೆ ಆಧುನಿಕ ಮಹಾನಗರದಲ್ಲಿ ಜನರು ತಮ್ಮ ತಮ್ಮ ಜಂಜಾಟಗಳಲ್ಲಿ ಮುಳುಗಿದ್ದರೂ ಮನುಷ್ಯ ಸಂಬಂಧ ಹಾಗೂ ಮಾನವೀಯ ಸ್ಪಂದನೆಗಳು ಕಳೆದುಹೋಗಿಲ್ಲವೆಂಬ ಸಂಗತಿಯನ್ನು ಕಥೆ ಅನಾವರಣಗೊಳಿಸುತ್ತದೆ. ಮಹಾಲಕ್ಷ್ಮಿ ಸ್ಟೇಷನ್ನಿನಲ್ಲಿ ನಿರಾಳವಾಗಿ ಯಾವ ಆತಂಕವೂ ಇಲ್ಲದೆ ನಿಶ್ಚಲವಾಗಿ ನಿಂತಿದ್ದ ಬಾಬನನ್ನು ನೋಡಿ ಕಣ್ಣೀರು ಸುರಿಸುತ್ತಾ ಹೋಗಿ ಹಸ್ತಾಕ್ಷರ ತಬ್ಬಿಕೊಂಡಾಗ " ಅಂಥದ್ದೇನಿಲ್ಲ, ಪಾಪ ಜನ ಒಳ್ಳೆಯವರು. ನಾನು ಒಬ್ಬನೇ ಹೊಸಬನಂತೆ ಕಂಡಿರಬೇಕು. ನೀವು ಹತ್ತಲಾಗದೆ ಹೋದದ್ದನ್ನು ಗಮನಿಸಿರಬೇಕು. ನಿಮ್ಮಂತದೇ ಪೋರನೊಬ್ಬ ಎಲ್ಲಿ ಹೊರಟಿದ್ದೀರಿ ಅಂತ ಕೇಳಿದ ನನಗೆಲ್ಲಿ ಗೊತ್ತಾಗಬೇಕು ಸ್ಟೇಷನ್ ಹೆಸರು.. ದೋಬಿ ಘಾಟ್ ಅಂದುಬಿಟ್ಟೆ. ಹಾಗಾದರೆ ಮಹಾಲಕ್ಷ್ಮಿಯಲ್ಲಿ ಇಳಿಯಿರಿ. ಇಲ್ಲೇ ನಿಲ್ಲಿ ನಿಮ್ಮವರು ಹಿಂದಿನ ರೈಲಿನಲ್ಲಿ ಬಂದು ನಿಮ್ಮನ್ನು ಸೇರಿಕೊಳ್ಳುತ್ತಾರೆಂದು ಇಳಿಯುವಾಗ ಚೂರು ತ್ರಾಸಾಗದಂತೆ ಜನಾನೇ ಧಕ್ಕಾ ಕೊಟ್ಟು ಇಳಿಸಿ ಬಿಟ್ರುಪ್ಪಾ ಎಂದ. ನಿಷ್ಕಲ್ಮಶವಾದ ಸಾಮೂಹಿಕ ನಲ್ಮೆಯಿಂದಲೇ ಸಾಧ್ಯವಾದಂತ ನಿರ್ಭಯ ಅವನ ನಿಲುವಿನಲ್ಲಿತ್ತು. ಅದು ಎಲ್ಲರನ್ನೂ ಹಗುರಗೊಳಿಸುವಂತಿತ್ತು "೮ ಕಥೆಯ ಈ ಚಿತ್ರಣ ಆಧುನಿಕತೆಯ ಎಲ್ಲ ಜಂಜಾಟಗಳ ನಡುವೆಯೂ ಮನುಷ್ಯ ಸಂಬಂಧ ಜೀವಂತವಾಗಿವೆಯೆಂಬ ಆಶಾಕಿರಣಗಳನ್ನು ಮೂಡಿಸುತ್ತದೆ.

ಒಟ್ಟಿನಲ್ಲಿ ಮಹಾನಗರಗಳಲ್ಲಿ ಆಧುನಿಕತೆಯ ಪ್ರಭಾವದಿಂದ ಮನುಷ್ಯ ಮನುಷ್ಯರ ನಡುವೆ ಅಂತರ ಸೃಷ್ಟಿಯಾಗುತ್ತಿದೆ, ಮನುಷ್ಯ ಸಂಬಂಧಗಳೆಲ್ಲವೂ ಯಾಂತ್ರಿಕವಾಗುತ್ತಿದೆಯೆಂಬ ಟೀಕೆ ಹಾಗೂ ಆಪಾದನೆಗಳ ನಡುವೆ ಜಯಂತ್ ಕಾಯ್ಕಿಣಿಯವರ ಕಥೆಗಳು ಭಿನ್ನವಾಗಿ ಕಾಣಿಸುತ್ತವೆ. ಅಲ್ಲದೇ ಆಧುನಿಕತೆಯ ಅನೇಕ

ಸಂಗತಿಗಳು ಪ್ರಸ್ತುತ ದಿನಗಳಲ್ಲಿ ತಲ್ಲಣಗಳನ್ನು ಮೂಡಿಸುತ್ತಿರುವ ಇಂದಿನ ದಿನಗಳಲ್ಲಿ ಜಯಂತ್ ಕಾಯ್ಕಿಣಿಯವರ ಈ ಎಲ್ಲ ಕಥೆಗಳ ಈ ಚಿತ್ರಣಗಳು ಹೊಸ ಭರವಸೆಯನ್ನು ಮೂಡಿಸುತ್ತದೆ.

**ಕೊನೆಯ ಟಿಪ್ಪಣಿಗಳು**:

1. ಜಯಂತ್ ಕಾಯ್ಕಿಣಿ : ಜಯಂತ್ ಕಾಯ್ಕಿಣಿ ಅವರ ಕಥೆಗಳು ( ಪ್ರಶಸ್ತಿ ವಿಜೇತ ಮೂರು ಪುಸ್ತಕಗಳ ಸಂಪುಟ) ಪು.ಸಂ – ೧೫೦
2. ಅದೇ ಕೃತಿ ( ದಗಡೂ ಪರುಬನ ಅಶ್ವಮೇಧ ಸಂಕಲನದ ಕಣ್ಣಿಗೊಂದು ಕ್ಷಿತಿಜ ಕಥೆ ) ಪು. ಸಂ ೧೫೨
3. ಅದೇ ಕೃತಿ( ದಗಡೂ ಪರೋಬನ ಅಶ್ವಮೇಧ ಸಂಕಲನದ ಆರೋಹ ಕಥೆ) ಪು. ಸಂ ೧೬೭
4. ಅದೇ ಕೃತಿ ( ಅಮೃತ ಬಳ್ಳಿ ಕಷಾಯ ಕಥೆ ) ಪು. ಸಂ ೩೯೭
5. ಜಯಂತ್ ಕಾಯ್ಕಿಣಿ : ಚಾರ್ಮಿನಾರ್ ಪು. ಸಂ ೪೪
6. ಅದೇ ಕೃತಿ ಪು. ಸಂ –೧೩೧
7. ಜಯಂತ್ ಕಾಯ್ಕಿಣಿ : ಅನಾರ್ಕಲಿಯ ಸೇಫ್ಟಿ ಪಿನ್ ಪು. ಸಂ ೧೬೨
8. ಅದೇ ಕೃತಿ ಪು. ಸಂ ೧೭೧

**ಪರಾಮರ್ಶನ ಗ್ರಂಥಗಳು**

೧. ಜಯಂತ ಕಾಯ್ಕಿಣಿ : ಚಾರ್ಮಿನಾರ್ ೨೦೧೨, ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು.

೨. ಡಾ. ಮಮತಾ ರಾವ್ : ಜಯಂತ ಕಾಯ್ಕಿಣಿಯವರ ಕಥನಾವರಣ ೨೦೧೫, ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು.

೩. ಡಾ. ಮಮತಾ ರಾವ್: ಸಾಹಿತ್ಯ ಸಹವಾಸ ( ವಿಮರ್ಶಾ ಲೇಖನಗಳು) ೨೦೧೪, ಸಾಹಿತ್ಯ ನಂದನ ಪುಸ್ತಕ ಪ್ರಕಾಶನ ಬೆಂಗಳೂರು.

೪. ಡಾ. ಟಿ.ಪಿ ಅಶೋಕ: ಸಾಹಿತ್ಯ ಸಮೃದ್ಧಿ ( ವಿಮರ್ಶಾ ಲೇಖನಗಳು) ೨೦೧೩, ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು.

೫. ಎಸ್. ಆರ್. ವಿಜಯಶಂಕರ: ಒಳದನಿ ೨೦೧೨, ಸಾಗರ್ ಪ್ರಕಾಶನ ಬೆಂಗಳೂರು.